ಏನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಕಂಬತಹಳ್ಳಿ ಗ್ರಾಮದಲ್ಲಿ ಉಪ-ಕೇಂದ್ರ ಸ್ಥಾಪಿಸಿದ ಪ್ರಸ್ತಾಪವಿರುವುದಿಲ್ಲ.

ಶ್ರೀ ಬಿ.ಹೆಚ್. ಯಂಕಾನಾಯ್ಕ.—ಸ್ವಾಮಿ, ಹರಪನಹಳ್ಳಿ ತಾಲ್ಲೂಕಿನಲ್ಲಿ ಇಂಗ್ಲೀಷಿನವರ ಕಾಲದಲ್ಲಿ ಒಂದೇ ಒಂದು ಸ್ಟೇಷನ್ ಆಗಿತ್ತು. ನಮಗೆ ಸ್ವಾತಂತ್ರ್ಯ ಬಂದು ೪೦-೪೫ ವರ್ಷಗಳಾದರೂ ಕೂಡ ಇವತ್ತಿಗೂ ಅಲ್ಲಿ ಒಂದು ಸಬ್‌ಸ್ಟೇಷನ್ ಇಲ್ಲಅಲ್ಲಿ ಇರತಕ್ಕ ಪಂಪ್‌ಸೆಟ್ಸ್‌ಗೆ ಇದರಿಂದ ತೊಂದರೆಯಾಗಿದೆ. ಅಲ್ಲಿ ಸರಿಯಾದ ವ್ಯವಸ್ಥೆ ಇಲ್ಲ. ತೆಲಗಿಯಲ್ಲಿ ಒಂದು ಸಬ್‌ಸ್ಟೇಷನ್ ಮಾಡುತ್ತೇವೆ ಎಂದು ಉತ್ತರದಲ್ಲಿ ಕೊಟ್ಟಿದ್ದೀರಿ. ಹಲವಾಗಲು ಮತ್ತು ಕಂಬತ್ತಹಳ್ಳಿಗೆ ಎರಡು ಸಬ್‌ಸ್ಟೇಷನ್‌ಗಳನ್ನು ಮಾಡಿಕೊಡ ಬೇಕು ಎಂದೂ ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಕೇಳಬಯಸುತ್ತೇನೆ.

ಶ್ರೀ ಎಸ್.ಎಂ. ಯಾಹ್ಯಾ.—ಅಲ್ಲಿ ಸಬ್‌ಸ್ಟೇಷನ್ ೭೮ ಲಕ್ಷದ ೬೫ ಸಾವಿರ ರೂಪಾಯಿಗಳಲ್ಲಿ ಮಾಡಲು ೧೯೬೦-೬೧ರ ಬಜೆಟ್‌ನಲ್ಲಿ ಸಹ ಇಟ್ಟಿದ್ದೇವೆ.

ಶ್ರೀ ಬಿ.ಹೆಚ್. ಯಂಕಾನಾಯ್ಕ.—ಕಂಬತ್ತಹಳ್ಳಿ ಮತ್ತು ಹಲವಾಗಲುಗಳಲ್ಲಿ ಪಂಪ್‌ಸೆಟ್ಸ್ ಇವೆ, ಬಹಳ ತೊಂದರೆಯಾಗುತ್ತಿದೆ. ದಯವಿಮಾಡಿ ತಾವು ಈ ಎರಡು ಹಳ್ಳಿಗಳಲ್ಲಿ ಎರಡು ಸಬ್ ಸ್ಟೇಷನ್‌ಗಳನ್ನು ಮಾಡಲು ಈ ಸಲ ಅಥವಾ ಮುಂದಿನ ಸಲವಾದರೂ ಬಜೆಟ್‌ನಲ್ಲಿ ಸೇರಿಸಿ ಇದಕ್ಕೆ ಮಂಜೂರಾತಿ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್, ಎಂ. ಯಾಹ್ಯಾ.—ಎರಡು ಹಳ್ಳಿಗಳಲ್ಲಿ ಮಾಡುವುಂಥ ಪ್ರಪೋಸಲನ್ನು ನಾವು ವಿಕ್ಸಮಿನ್ ಮಾಡುತ್ತಾ ಇದ್ದೇವೆ. ಇನ್ನೊಂದು ಹಳ್ಳಿಗೆ ಸ್ವಲ್ಪ ಕಷ್ಟ ಇವೆ.

ಹಾಸನ ನಗರದ ಕಿಂಕೋ ಫ್ಯಾಕ್ಟರಿಯ ಬಗ್ಗೆ

೬೭೭. ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಕೈಗಾರಿಕೆ, ಇಂಧನ ಹಾಗೂ ವರ್ಕ್ಸ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೫೭-೫೮, ೧೯೫೮-೫೯ ಮತ್ತು ೧೯೫೯ರಲ್ಲಿ ಹಾಸನ ಪಟ್ಟಣದ ಕಿಂಕೋ ಫ್ಯಾಕ್ಟರಿಗೆ ಆದ ನಷ್ಟ ಎಷ್ಟು ? (ವರ್ಷವಾರು ಮಾಹಿತಿ ಕೊಡುವುದು).

ಆ) ಈ ರೀತಿ ನಷ್ಟವಾಗಲು ಕಾರಣಗಳೇನು ?

ಇ) ಈ ಫ್ಯಾಕ್ಟರಿಯು ಲಾಭದಾಯಕವಾಗಿ ನಡೆಯುವಂತಾಗಲು ಏನು ಕಾರ್ಯಕ್ರಮ ತೆಗೆದುಕೊಳ್ಳಲಿದೆ ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕಾ, ಇಂಧನ ಹಾಗೂ ವರ್ಕ್ಸ್ ಸಚಿವರು).—

ಅ) ಹಾಸನದಲ್ಲಿರುವ ಕಿಂಕೋ ಕಾರ್ಖಾನೆಯು ೧೯೫೭-೫೮, ೫೮-೫೯ ಮತ್ತು ೧೯೫೯-೬೦ರಲ್ಲಿ ಈ ಕೆಳಕಂಡಂತೆ ನಷ್ಟ ಅನುಭವಿಸಿದೆ :

ವರ್ಷ	ಲಕ್ಷ ರೂ. ಗಳಲ್ಲಿ
೧೯೫೭-೫೮	೫೩.೭೨
೧೯೫೮-೫೯	೧೨.೨೨
೧೯೫೯-೬೦	೬೨.೦೦

ಆ) ಕಂಪನಿಯು ಈ ಕೆಳಕಂಡ ಕಾರಣಗಳಿಂದ ನಷ್ಟವನ್ನು ಅನುಭವಿಸಿದೆ.

೧) ಸಾಕಷ್ಟು ಕೆಲಸವಿಲ್ಲದ ಪ್ರಯುಕ್ತ ಇರುವ ಪೂರ್ಣ ಪ್ರಮಾಣದ ಯಂತ್ರಸ್ಥಾವರ ಶಕ್ತಿಯನ್ನು ಬಳಸಲಾಗದ ಕಾರಣ.

೨) ಅಗತ್ಯಕ್ಕಿಂತ ಹೆಚ್ಚಿನ ಕಾರ್ಮಿಕರು ಹಾಗೂ ಅವರ ಹೆಚ್ಚಿನ ವೇತನದ ಕಾರಣ.

೩) ಕ್ಯೋಢಿಕೃತ ನಷ್ಟದಿಂದಾಗಿ ಅತಿ ಹೆಚ್ಚಿನ ಸಾಲದ ಹೊರೆ ಉಂಟಾಗಿದೆ.

ಇ) ೧) ಕಂಪನಿಯು ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡಲು ಈ ಕಂಪನಿಗೆ ಸಾಕಷ್ಟು ಚಾಸಿಗಳನ್ನು ಒದಗಿಸುವಂತೆ ಕೆ.ಎಸ್.ಆರ್.ಟಿ.ಸಿ.ಯನ್ನು ಕೋರಲಾಗಿದೆ.

೨) ಮಾರುಕಟ್ಟೆ ಬೆಲೆಯ ಹೆಚ್ಚಳವನ್ನು ಗಮನಿಸಿ ಬೆಲೆಯನ್ನು ನಿಗಧಿಪಡಿಸಲ್ಕೆ ಕೆ.ಎಸ್.ಆರ್.ಟಿ.ಸಿ.ಯನ್ನು ಕೋರಲಾಗಿದೆ.

೩) ಬೇರೆ ವಿಜೆನ್ಸಿ ಮೂಲಕ ಆರ್ಡರ್‌ಗಳನ್ನು ಪಡೆಯಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಶ್ರೀ ಕೆ ಹೆಚ್. ಹನುಮೇಗೌಡ:—ಸ್ವಾಮಿ, ತಾರೀಖು ೨೮–೮–೮೮ರಲ್ಲಿ ಸರ್ಕಾರ ಆಜ್ಞೆ ಮಾಡಿ, ಹಾಸನದ ಕಿಮ್ಕೋ ಫ್ಯಾಕ್ಟರಿಯನ್ನು ಕರ್ನಾಟಕ ಸಾರಿಗೆ ಸಂಸ್ಥೆಯ ಅಂಗ ಸಂಸ್ಥೆಯನ್ನಾಗಿ ಪರಿವರ್ತನೆ ಮಾಡಿರುವುದು ನಿಜವೆ? ಹಾಗೆ ಪರಿವರ್ತನೆ ಮಾಡಿರುವುದು ನಿಜವಾಗಿದ್ದರೆ, ಆ ಫ್ಯಾಕ್ಟರಿಯ ಮ್ಯಾನೇಜ್‌ಮೆಂಟ್ ಮತ್ತು ಫ್ಯಾಕ್ಟರಿಯ ಕೆಲಸಗಾರರಿಗೆ ಸಾಕಷ್ಟು ಕೆಲಸ ಕೊಡುವುದು ಹಾಗೂ ಸಂಬಳ ಕೊಡುವುದು ಕೆ.ಎಸ್.ಆರ್.ಟಿ.ಸಿ.ಯ ಜವಾಬ್ದಾರಿ ಆಲ್ಲವೆ ?

ಶ್ರೀ ಎಸ್. ಎಂ. ಯಾಹ್ಯಾ.—ಹಾಸನ ಮತ್ತು ಬೆಂಗಳೂರಿನ ಕಿಮ್ಕೋದ ಎರಡು ಘಟಕಗಳು ಕೆಲಸ ಇಲ್ಲದ ಕಾರಣ ನಷ್ಟದಲ್ಲಿ ನಡೆಯುತ್ತಿದ್ದವು. ಈಗ ಅವುಗಳನ್ನು ಕೆ.ಎಸ್.ಆರ್.ಟಿ.ಸಿ.ಯ ಸಬ್ಸೀಡರಿಯಾಗಿ ಮಾಡಿದ್ದೇವೆ. ಅದಕ್ಕೆ ಮ್ಯಾನೇಜಿಂಗ್ ಡೈರೆಕ್ಟರ್ ಕೆ ಎಸ್.ಆರ್.ಟಿ.ಸಿ.ಯವರೇ ಇರುತ್ತಾರೆ.

ಅಧ್ಯಕ್ಷರು,—ಕೆ.ಎಸ್.ಆರ್.ಟಿ.ಸಿ. ಲಾಭ ಮಾಡುತ್ತಿದೆ.

ಶ್ರೀ ಕೆ.ಹೆಚ್. ಹನುಮೇಗೌಡ.—ಸ್ವಾಮಿ, ೬೦–೭೦ ವರ್ಷಗಳ ಹಿಂದೆ ಪುಲಿನಾಡು ಪ್ರದೇಶವಾದ ಹಾಸನದಲ್ಲಿ ಈ ಕೈಗಾರಿಕೆಯನ್ನು ಪ್ರಾರಂಭ ಮಾಡಿದರು. ಅದು ವ್ಯವಸಾಯದ ಉಪಕರಣಗಳನ್ನು ತಯಾರು ಮಾಡಿ, ಚೆನ್ನಾಗಿ ಲಾಭ ಮಾಡುತ್ತಿತ್ತು. ದೇಶದ ಎಲ್ಲಾ ಕಡೆ ಇದರ ವ್ಯವಹಾರ ಇತ್ತು. ಅದನ್ನು ಹಾಗೆ ಬಿಟ್ಟಿದ್ದರೆ, ಅಲ್ಲಿ ಕೆಲಸಗಾರರು ಹೇಗೋ ಜೀವನ ಮಾಡುತ್ತಿದ್ದರು. ಆದರೆ, ಕೆ.ಎಸ್.ಆರ್.ಟಿ.ಸಿ.ಯವರು ಸುಮ್ಮನಿರಲಾರದೆ, ನಾವು ಏನೋ ಮಾಡುತ್ತೇವೆಂದು ಇದನ್ನು ತೆಗೆದು ಕೊಂಡಿದ್ದಾರೆ. ಇವರದ್ದೇ ದೊಡ್ಡ ಹೆಗರಣ ಇರುವಾಗ ತಮ್ಮ ಕಡೆ ಮಹಿಸಿಕೊಂಡು, ಅಲ್ಲಿರತಕ್ಕ ಫಾರಿನ್ ಮಿಷನರಿಗಳನ್ನು ಕೋಟಿಗಟ್ಟಲೆ ಕೊಟ್ಟರೂ ಸಿಗುವುದಿಲ್ಲವಂತೆ. ಅಂಥ ಮಿಷನರಿಗಳನ್ನು ವಾರ್ಯಾರಿಗೊ ಯದ್ವಾತದ್ವಾ ವಹಾರಿದ್ದಾರೆ.

ಅಧ್ಯಕ್ಷರು.—ಅವೆಲ್ಲ ಅಂಟಿಕ್‌ಪೀಸಸ್ ಆಗಿದ್ದುವು. ಮಿಷನರಿ ಬಹಳ ವರ್ಷ ಇದ್ದರೆ ಅವೆಲ್ಲ ಆಂಟಿಪೀಸಸ್...

ಶ್ರೀ ಕೆ. ಹೆಚ್. ಹನುಮೇಗೌಡ.—ಅವೆಲ್ಲಾ ಸ್ಟಾರ್ಟ್ ಆಗಿರಲಿಲ್ಲ. ಬಂದವನ್ನು ಹಾಗೆಯೇ ಇಟ್ಟಿದ್ದರು, ಹಾಗೆ ಇದ್ದವು. ಟಾಟಾ ಬಿರ್ಲಾ ಕಂಪನಿಯವರು ಬಂದು ಆ ಮಿಷನರಿಗಳನ್ನು ತೆಗೆದು ಕೊಂಡು ಹೋಗಿದ್ದಾರೆಂದರೆ ಏನು ಹೇಳಬೇಕು. ಆ ಮಿಷಿನ್‌ಗಳನ್ನು ಅವರು ಮಾರಿಬಿಟ್ಟರು. ಈಗ ಅಲ್ಲಿ ಕೆಲಸಗಾರರು ಉಳಿದಿದ್ದಾರೆ. ಆ ಫ್ಯಾಕ್ಟರಿಯ ನಾಲ್ಕು ಗೋಡೆ ಉಳಿದಿವೆ. ಕೆ ಎಸ್.ಆರ್.ಟಿ.ಸಿ. ಬೋಲ್ಟು–ನಟ್ಟು–ಇಷ್ಟು ಮಾತ್ರ ಉಳಿದಿವೆ. ಅಲ್ಲಿ ಕೆಲಸ ಕೊಡುವುದಿಲ್ಲ ಅಂದರೆ ನೌಕರರ ಗತಿ ಏನು ? ಒಂದು ಕಡೆ ಜಾಸ್ತಿ ಜಾಸ್ತಿ ಕೈಗಾರಿಕೆ ಮಾಡಬೇಕು, ನಿರುದ್ಯೋಗ ಸಮಸ್ಯೆ ಬಗೆಹರಿಸಬೇಕೆಂದು, ಉತ್ಪತ್ತಿ ಜಾಸ್ತಿ ಮಾಡಬೇಕು ನೀವು ಸ್ವರ್ಗಕ್ಕೆ ಹೋಗಬೇಕೆಂದು ಭಾಷಣ ಮಾಡುವುದು, ಇನ್ನೊಂದು ಕಡೆ ಕೆಲಸಗಾರರನ್ನು ಬೀದಿ ಪಾಲು ಮಾಡುವುದು ಅಂದರೆ, ಇದೇನು ಹುಡುಗಾಟವೆ? ಇವರನ್ನು ಹೇಳುವವರು ಕೇಳುವವರು ಯಾರೂ ಇಲ್ಲವೆ ಹೊನ್ನೆದಿನ ೫೦೦–೬೦೦ಜನ ಲೇಬರರಸ್ ನಮ್ಮ ಮನೆ ಮುಂದೆ ಕುಳಿತು ಉಪವಾಸ ಮಾಡುತ್ತೇವೆಂದು ಬಂದಿದ್ದರು. ಆಗ ನಾನು ಮುಖ್ಯಮಂತ್ರಿಗಳ ಮನೆ ಮುಂದೆ ಹೋಗಿ ಮಾಡಿ, ನಾನು ಬಡಪಾಯಿ ನಾನು ಹುಕ್ಕುಂ ಮಾಡಿವವನೂ ಅಲ್ಲ, ಈ ವ್ಯವಹಾರ ನನಗೆ ಗೊತ್ತಿಲ್ಲ ಇದಕ್ಕೆ ನಾನು ಪಾಲುದಾರ ಅಲ್ಲವೆಂದು ತಿಳಿಸಿದೆ. ಆದ್ದರಿಂದ ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ. ನೂರೋ ಪುಣ್ಯಾತ್ಮರು ಪ್ರಾರಂಭಿಸಿದ ದೊಡ್ಡ ದೊಡ್ಡ ಫ್ಯಾಕ್ಟರಿಗಳನ್ನು ಮುಚ್ಚುವುದಕ್ಕೆ ಅವಕಾಶ ಕೊಡಬೇಡಿ. ಹಾಗೆ ಮಾಡಿದರೆ ನಾವು ಮುಂಖ ಹೊತ್ತುಕೊಂಡು ಹೇಗೆ ತಿರುಗಾಡುವುದು. ಅಲ್ಲಿನ ಕೆಲಸಗಾರರಿಗೆ ಎರಡು ತಿಂಗಳಿಂದ ಸಂಬಳ ಕೊಟ್ಟಿಲ್ಲ.

ಅಧ್ಯಕ್ಷರು. —ಪಾಪ ಯಾಹ್ಯಾರವರು ಬಂದು ಒಂದು ತಿಂಗಳು ಆಗಿದೆ ಅಷ್ಟೆ.

ಶ್ರೀ ಎಸ್. ಎಂ. ಯಾಹ್ಯಾ —ಮಾನ್ಯ ಅಧ್ಯಕ್ಷರೆ, ಈ ಕಾರ್ಖಾನೆಗಳನ್ನು ಅಗ್ರಿಕಲ್ಚರಲ್ ಅಪ್ಲೈಯನ್ಸಸ್‌ಗಾಗಿ ಮಾಡಿದ್ದು. ಆ ಕಾಲದಲ್ಲಿಯೇ ಇದು ಲಾಸಾಗಿ ಮಾರುಕಟ್ಟೆ ಇಲ್ಲದೆ ಬಹಳ ಕಷ್ಟದಲ್ಲಿತ್ತು, ಕೆ.ಎಸ್.ಆರ್.ಟಿ.ಯವರು ತನ್ನ ಚಾಸಿಸ್‌ನಿಂದ ಬಾಡಿ ಬಿಲ್ಡಿಂಗ್ ಮಾಡುವುದು,

ಫ್ಯಾಬ್ರಿಕೇಷನ್ ಮಾಡುವುದು ಮಾಡುತ್ತಿದ್ದಾರೆ. ಕಳೆದ ೩-೪ ವರ್ಷದಲ್ಲಿ ಕೆ.ಎಸ್.ಆರ್.ಟಿ.ಸಿ. ಯವರು ಚಾಸಿಗಳನ್ನು ತೆಗೆದುಕೊಳ್ಳದೇ ಇದ್ದ ಕಾರಣದಿಂದ ಈ ಫ್ಯಾಕ್ಟರಿ ಇನ್ನೂ ಲಾಸಾಗಿದೆ. ಹೆಚ್ಚು ಚಾಸಿಗಳನ್ನು ತೆಗೆದುಕೊಂಡು ಎರಡೂ ಘಟಕಗಳಿಗೆ ಕೊಡಿ ಎಂದು ಕೆ.ಎಸ್.ಆರ್.ಟಿ.ಸಿ. ಯವರಿಗೆ ಹೇಳುತ್ತಾ ಇದ್ದೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಮಂತ್ರಿಗಳು ಇಷ್ಟು ಆರ್ಡರ್ ಮಾಡುತ್ತಾರೆಯೆ? ಪ್ರತಿ ತಿಂಗಳು ಬಾಡಿ ಕಟ್ಟುವುದಕ್ಕೆ ಚಾಸಿಸ್ ಬರುತ್ತವೆ, ಅವುಗಳನ್ನು ಖಾಸಗಿಯವರಿಗೆ ಏತಕ್ಕೆ ಕೊಡುತ್ತೀರಿ ? ಕೆ.ಎಸ್.ಆರ್.ಟಿ.ಸಿ.ಯ ಆಂಗಸಂಸ್ಥೆ ಇರುವಾಗ ಖಾಸಗಿ ಯವರಿಗೆ ಏತಕ್ಕೆ ಕೊಡಬೇಕು. ಹಿಂದೆ ಕೊಟ್ಟಿದ್ದು ಆಯಿತು. ಇನ್ನು ಮುಂದಕ್ಕಾದರೂ ಇವರಿಗೆ ಕೊಟ್ಟು ಹೆಚ್ಚಾದ ಮೇಲೆ ಬೇರೆಯವರಿಗೆ ಕೊಡುತ್ತೇವೆ ಎಂದು ಭರವಸೆ ಕೊಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಕೆ.ಎಸ್.ಆರ್.ಟಿ.ಸಿ. ಚಾಸಿಸ್ ಮಾತ್ರವಲ್ಲ ಖಾಸಗಿ ಯವರ ಚಾಸಿಸ್‌ಗಳನ್ನು ಕೂಡ ಬಾಡಿ ಕಟ್ಟಲಿಕ್ಕೆ ಕೊಡುತ್ತೇವೆ. ಕೆ ಎಸ್. ಆರ್. ಟಿ. ಸಿ ಯವರು ತೆಗೆದುಕೊಳ್ಳಲಿಲ್ಲ ಅಂದರೆ ಏನೂ ಮಾಡಲಿಕ್ಕೆ ಸಾಧ್ಯವಿಲ್ಲ. ಕೆ.ಎಸ್.ಆರ್ ಟಿ.ಸಿ. ಯವರ ಚಾಸಿಗಳನ್ನು ಕೊಡಲಿಕ್ಕೂ ಪ್ರಯತ್ನ ಮಾಡುತ್ತೇವೆ. ಖಾಸಗಿಯವರ ಚಾಸಿಗಳನ್ನು ಹಾಸನಕ್ಕೆ ಕಳುಹಿಸಿಕೊಡುತ್ತೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ನನ್ನ ಪ್ರಶ್ನೆ ಅದಲ್ಲ. ಈಗ ೫೦ ಚಾಸಿಸ್ ಪ್ರತಿ ತಿಂಗಳು ಬಾಡಿ ಬಿಲ್ಟ್‌ಅಪ್ ಮಾಡಲಿಕ್ಕೆ ಬಂದರೆ ಎರಡು ಮೂರು ಸ್ಕಾಂಪಲ್ ಕಿಮ್ಮೋಗೆ ಕೊಡುತ್ತಾರೆ. ಉಳಿದವನ್ನು ಪ್ರೈವೇಟ್‌ನವರಿಗೆ ಏತಕ್ಕೆ ಕೊಡುತ್ತಾರೆ. ಇನ್ನು ಎರಡನೆಯದು ಅಂದರೆ ನಮಗೆ ಚಾಸಿಸ್ ಕಟ್ಟಲಿಕ್ಕೆ ಫ್ಯಾಕ್ಟರಿಯಲ್ಲಿ ಎಷ್ಟು ಕೆಪಾಸಿಟಿ ಇದೆ ಅದಕ್ಕೆ ವಿಸ್ತರಿದ್ದು ಬೇರೆ ಕಡೆ ಕೊಡಿ. ಫುಲ್ ಕೆಪಾಸಿಟಿಗೆ ತಕ್ಕಹಾಗೆ ಇವರಿಗೆ ಬಂದಂಥ ಚಾಸಿಗಳನ್ನು ಬಾಡಿ ಬಿಲ್ಟ್‌ಅಪ್ ಮಾಡಲಿಕ್ಕೆ ಕಿಮ್ಮೋ ಫ್ಯಾಕ್ಟರಿಗೆ ಕೊಡುತ್ತೇವೆಂದು ಈ ಸದನದಲ್ಲಿ ಮಾನ್ಯ ಮಂತ್ರಿಗಳು ಭರವಸೆ ಕೊಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಕೆ.ಎಸ್.ಆರ್.ಟಿ.ಸಿ.ಗೆ ನಾವು ಕೇಳಿಕೊಳ್ಳುತ್ತೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ತಾವು ಕೇಳುವುದು ಅವರು 'ಹೌದು' ಎಂದು ಹೇಳುವುದು, ಆ ಮೇಲೆ ಬೇಡ ಎಂದು ಹೇಳುವುದು ಆದರೆ ಈಗ ವರ್ಕರ್ಸ್ ಗತಿ ಏನು. ಇವರು ಕೆಲಸ ಇಲ್ಲದೇ ಕುಳಿತಿದ್ದಾರಲ್ಲ ಅದರ ಬಗ್ಗೆ ಹೇಳಿ.

ಅಧ್ಯಕ್ಷರು.—ಈಗ ಎರಡು ಪ್ರಶ್ನೆಗಳು ಉದ್ಭವಿಸುತ್ತವೆ. ತಾವು ಕೆ ಎಸ್.ಆರ್.ಟಿ.ಸಿ.ಯವರಿಗೆ ಪ್ರತಿ ತಿಂಗಳು ಎಷ್ಟು ಛಾಸಿಸ್ ತರಿಸಿಕೊಳ್ಳುತ್ತೀರಾ ಎಂದು ಇನ್ನೊಂದು ಪ್ರಶ್ನೆ ಹಾಕಿ. ಉತ್ತರ ತರಿಸಿಕೊಳ್ಳಿ. ಆನಂತರ ಆ ಉತ್ತರದ ಆಧಾರದ ಮೇಲೆ ಮತ್ತೊಂದು ಪ್ರಶ್ನೆ ಇವರಿಗೆ ಹಾಕಿ.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ ಪಕ್ಕಪಕ್ಕದಲ್ಲಿಯೇ ಕುಳಿತುಕೊಂಡಿರುತ್ತಾರೆ, ಇವರೇ ಮಾತನಾಡಿಕೊಂಡು ಮಾಡಲಿಕ್ಕೆ ಆಗುವುದಿಲ್ಲವೆ. ನಾನು ಮತ್ತೊಂದು ಪ್ರಶ್ನೆ ಕೇಳಿ, ಅದು ಆಲ್ಲಿಗೆ ಹೋಗಿ, ಮತ್ತೆ ಇಲ್ಲಿಗೆ ಬಂದು ಇದೆಲ್ಲಾ ಆಗುವುದರೊಳಗೆ ಈ ಅಧಿವೇಶನವೇ ಮುಗಿದು ಹೋಗುತ್ತದೆ ಅಥವಾ ನನ್ನ ಟರ್ಮ್ ಆಗುತ್ತದೆಯೋ ಏನೋ ಗೊತ್ತಿಲ್ಲ. ಆದ್ದರಿಂದ ಅವರು ಪಕ್ಕದಲ್ಲಿಯೇ ಕುಳಿತುಕೊಂಡಿದ್ದಾರೆ. ಈ ಪ್ರಶ್ನೆಯನ್ನು ಒಂದು ನಿಮಿಷದಲ್ಲಿ ಸಾಲ್ವ್ ಮಾಡಲಿಕ್ಕೆ ಆಗುವುದಿಲ್ಲವೆ.

ಅಧ್ಯಕ್ಷರು.—ಈ ಪ್ರಶ್ನೆಯನ್ನು ಸಾಲ್ವ್ ಮಾಡಿ. ಈಗ ಮುಂದಿನ ಪ್ರಶ್ನೆ.

ಕ್ವಾರಿಗಳು (ಬ್ಲಾಕ್ ಗ್ರಾನೈಟ್ ಪಿಂಕ್ ಗ್ರಾನೈಟ್) ಮಂಜೂರಾತಿ ನೀಡಿದ ಮೇಲೆ ನಿಯಮಗಳ ಬದಲಾವಣೆ

೭೫೬. ಶ್ರೀ ಎಂ. ಪಿ. ವೆಂಕಟೇಶ್ (ಹೆಗಡದೇವನ ಕೋಟೆ).—ಮಾನ್ಯ ಸಮಾಜ ಕಲ್ಯಾಣ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕ್ವಾರಿಗಳು (ಬ್ಲಾಕ್ ಗ್ರಾನೈಟ್, ಪಿಂಕ್ ಗ್ರಾನೈಟ್) ಮಂಜೂರಾತಿಯನ್ನು ನೀಡಿದ ಮೇಲೆ ನಿಯಮಗಳಲ್ಲಿ ಬದಲಾವಣೆ ಏನಾದರೂ ಆಗಿದೆಯೇ ?

ಆ) ಕ್ವಾರಿ ಮಂಜೂರಾತಿ ನಿಯಮಗಳು ಹಾಗೂ ಇತರೆ ನಿಬಂಧನೆಗಳು (ಷರತ್ತು) ಸಡಿಲವಾಗುವ ಅವಕಾಶಗಳು ಇರುವುದು ನಿಜವೆ ?